1	2	3	4
		4) ಚನ್ನರಾಯಪಟ್ಟಣ	101
		5) ಬೇಲೂರು	20
		6) ಹಾಸನ	10
		ಒಟ್ಟು	510

ಅನುಬಂಧ-2

1999-2000 ರಿಂದ 2002-2003 ರವರಗೆ ನೀಡಿದ ಸೈಕಲ್, ಬಲೆ ಮತ್ತು ಇತರೆ ಸಾಮಾಗ್ರಿಗಳ ತಾಲ್ಲೂಕುವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಸೈಕಲ್, ಬಲೆ ಇತರೆ ಸಾಮಾಗ್ರಿಗಳ ಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ
1)	ಹಾಸನ	1) ಹೊಳೆನರಸೀಪುರ	5
		2) ಚನ್ನರಾಯಪಟ್ಟಣ	6
		3) ಬೇಲೂರು	4
		4) ಅರಕಲಗೂಡು	2
		ಒಟ್ಟು	17

ಅನುಬಂಧ-3

1999-2000 ರಿಂದ 2001-2002 ರವರಗೆ ವಿಶೇಷ ಘಟಕ ಯೋಜನೆಯಡಿ ನೀಡಿದ ಸೈಕಲ್, ಬಲೆ ಮತ್ತು ಇತರೆ ಸಾಮಾಗ್ರಿಗಳ ತಾಲ್ಲೂಕುವಾರು ವಿವರ

1)	ಅರಕಲಗೂಡು	3
2)	ಅರಸೀಕೆರೆ	10
3)	ಸಕಲೇಶಪುರ	3
4)	ಬೇಲೂರು	9
5)	ಹೊಳೆನರಸೀಪುರ	8
6)	ಚನ್ನರಾಯಪಟ್ಟಣ	12
7)	ಆಲೂರು	4
8)	ಹಾಸನ	9
	ಒಟ್ಟು	58

ಕಮಲಾಪುರ ಕ್ಷೇತ್ರದಲ್ಲಿ ಬುದ್ಧ ಬಸವ ಅಂಬೇಡ್ಕರ್ ಭವನ ನಿರ್ಮಾಣ

1606 (2070) ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಕಮಲಾನಗರ ಮತಕ್ಷೇತ್ರದಲ್ಲಿ ವಿ.ಕೆ. ಸಲಗರ ಗ್ರಾಮದಲ್ಲಿ ಮಂಜೂರಾದ ಬುದ್ಧ ಬಸವ ಅಂಬೇಡ್ಕರ್ ಭವನ ನಿರ್ಮಾಣ ಕಳೆದ 3 ವರ್ಷದಿಂದ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದರೆ, ಪೂರ್ಣಗೊಳಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಗುಲ್ಬರ್ಗಾ ಜಿಲ್ಲೆ, ಕಮಲಾಪುರ ಕ್ಷೇತ್ರದ ವಿ.ಕೆ. ಸಲಗರ ಗ್ರಾಮಕ್ಕೆ ಮಂಜೂರಾದ ಮಿನಿ ಅಂಬೇಡ್ಕರ್ ಭವನದ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದು ಛತ್ತು (ರೂಫ್) ಹಾಕಲಾಗಿದೆ. ಬಾಕಿ ಉಳಿದ ಪ್ಲಾಸ್ಟರ್, ಫ್ಲೋರಿಂಗ್ ಹಾಗೂ ಇತರೆ ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಮಲ್ಪೆ ಮೀನುಗಾರಿಕೆ ಬಂದರು ಕಾಮಗಾರಿ

1607 (2026) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲ್ಪೆ ಮೀನುಗಾರಿಕಾ ಬಂದರಿನ 2ನೇ ಹಂತದ ಯೋಜನೆಯ ವಿವರಗಳೇನು? ಇವುಗಳಿಗೆ ಇಲಾಖೆ ತಯಾರಿಸಿದ ಹೆಚ್ಚುವರಿ ಅಂದಾಜು ಪಟ್ಟಿಯ ವಿವರಗಳೇನು? ಈ ಹೆಚ್ಚುವರಿ ಅಂದಾಜು ಪಟ್ಟಿಗೆ ಕೇಂದ್ರದ ಅನುಮೋದನೆ ದೊರಕಿದೆಯೇ?

ಆ) ದೊರಕದಿದ್ದಲ್ಲಿ ಕಾರಣವೇನು? 2ನೇ ಹಂತದ ಯೋಜನೆ ಯಾವಾಗ ಸಂಪೂರ್ಣಗೊಳ್ಳುವುದು? ದಿನಾಂಕ 28/02/2003ರ ವರಗೆ ಈ ಯೋಜನೆಗೆ ಬಿಡುಗಡೆಯಾದ ಹಣ ಎಷ್ಟು ವಿವರ ನೀಡುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಭಾರತ ಸರ್ಕಾರವು ದಿನಾಂಕ 19-2-1996ರಲ್ಲಿ ಉಡುಪಿ ಜಿಲ್ಲೆ, ಮಲ್ಪೆ ಮೀನುಗಾರಿಕೆ ಬಂದರಿನ 2ನೇ ಹಂತದ ಕಾಮಗಾರಿಯ ಅಂದಾಜು ವೆಚ್ಚ ರೂ. 1196.70 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ.

ರೂ. 21.60 ಕೋಟಿಯ ಹೆಚ್ಚುವರಿ ಅಂದಾಜು ಪಟ್ಟಿಯನ್ನು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ತಯಾರಿಸಿದ್ದು, ರಾಜ್ಯ ಸರ್ಕಾರವು ಸದರಿ ಪರಿಷ್ಕೃತ ಅಂದಾಜು ಪಟ್ಟಿಗೆ ದಿನಾಂಕ 19-11-2002ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ.

ಹೆಚ್ಚುವರಿ ಅಂದಾಜು ಪಟ್ಟಿಗೆ ಕೇಂದ್ರದ ಅನುಮೋದನೆ ದೊರೆತಿರುವುದಿಲ್ಲ.

ಆ) ನ್ಯಾಯಾಲಯ ಪ್ರಕರಣ ಅಥವಾ ನೈಸರ್ಗಿಕ ವಿಕೋಪ ಕಾರಣಗಳಲ್ಲದೆ ಬೇರೆ ಕಾರಣಗಳಿಂದ ಯೋಜನಾ ವೆಚ್ಚ ಪರಿಷ್ಕರಣೆಗೊಂಡಲ್ಲಿ ಅಂತಹ ಯೋಜನಾ ವೆಚ್ಚದ ಪರಿಷ್ಕರಣೆಯನ್ನು ಭಾರತ ಸರ್ಕಾರವು ಪರಿಗಣಿಸುವುದಿಲ್ಲ. ಈ ಯೋಜನೆಗಾಗಿ ಭಾರತ ಸರ್ಕಾರದಿಂದ ಮಂಜೂರಾದ ಅಂದಾಜು ವೆಚ್ಚ ರೂ. 1196.70 ಲಕ್ಷಗಳಿಗಿಂತ ಅಧಿಕವಾಗಿ ಉಂಟಾಗುವ ಹೆಚ್ಚಳವನ್ನು ರಾಜ್ಯ ಸರ್ಕಾರವೇ ಭರಿಸತಕ್ಕದ್ದೆಂದು ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ತಿಳಿಯಪಡಿಸಿರುತ್ತದೆ.

ಧಕ್ಕೆ, ಜಟ್ಟಿ, ಹೂಳೆತ್ತುವಿಕೆ, ಹರಾಜು ಪ್ರಾಂಗಣ, ನೀರು ಸರಬರಾಜು, ಆಂತರಿಕ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ದಾರಿದೀಪ ವ್ಯವಸ್ಥೆ ಪ್ರಗತಿಯಲ್ಲಿದೆ. ಕಛೇರಿ